ದಿನಾಂಕ **26.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿಪರ ಶ್ರೀ. ಕೆ ಎಸ್ ಆರ್ ವಕೀಲರಿಂದಃ-</u>

ದಿಃ24.10.2011 ರಂದು ವಾದಿಯು ನನ್ನ ತಾಯಿ ಕಮಲಮ್ಮರವರ ಹೆಸರಿಗೆ ಮಾಡಿಕೊಟ್ಟ ದಾನಪತ್ರದ ಮೂಲ ಪ್ರತಿಯನ್ನು ಮತ್ತು ಅದಕ್ಕೆ ಲಗತ್ತಾಗಿರುವ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. (ಸದರಿ ದಾಖಲೆಯ 3 ನೇ ಪುಟದ 1 ನೇ ಪ್ಯಾರಾದಲ್ಲಿ 3 ಸಾಲುಗಳನ್ನು ಚಿತ್ತುಮಾಡಲಾಗಿರುತ್ತದೆ) ಸದರಿ ದಾಖಲೆಗಳನ್ನು ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು.

ನನ್ನ ತಂದೆ-ತಾಯಿಯ ಮೂಲ ಆಧಾರ್ ಕಾರ್ಡ್ ಹಾಜರುಪಡಿಸಿರುತ್ತೇನೆ ಅದನ್ನು ನಿಡಿ 3 ಮತ್ತು 4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u>- ವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.